ನ್ಯಾಯಾಲಯಕ್ಕೆ ಹಾಜರುಪಡಿಸಿದೆ. ಮತ್ತು ಅವರನ್ನು ದಿನಾಂಕ 3.4.95ರ ವರೆಗೆ ನ್ಯಾಯಾಲಯ ಅಭಿರಕ್ಷೆಗೆ ಒಳಪಡಿಸಲಾಗಿದೆ.

ಈ ಮೂರು ಎತ್ತುಗಳನ್ನು ನ್ಯಾಯಾಲಯದ ಆದೇಶದ ಪ್ರಕಾರ ಅವುಗಳ ಮಾಲೀಕರಿಗೆ ಒಪ್ಪಿಸಲಾಗಿದೆ. 1ನೆಯ ಆಪರಾಧಿಗೆ ಸೇರಿದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆಯನ್ನು ಮುಂದುವರೆಸಲಾಗಿದೆ.

ಅದೇ ದಿನ ಕಳವು ಮಾಡಿದ್ದರೆಂದು ಶಂಕಿಸಲಾದ ಆಕಳುಗಳನ್ನು ತುಂಬಿದ ಟೆಂಪೋ ಒಂದು ಸಿರಸಿಯಿಂದ ಕುಮಟಾಕ್ಕೆ ಬರುತ್ತಿರುವುದಾಗಿ ದೂರವಾಣಿಯ ಮೂಲಕ ಮಾಹಿತಿಯಂತೆ ಸ್ಥಳೀಯ ಪೋಲೀಸರು ವಾಹನವನ್ನು ತಡೆದು ಪೋಲೀಸ್ ಠಾಣೆಗೆ ತಂದು ವಾಹನ ಸಂಖ್ಯೆ ಕೆ ಎ 31:648 (407 ಟೆಂಪೋ) ಟೆಂಪೋದಲ್ಲಿದ್ದವರನ್ನು ಪ್ರಶ್ನಿಸಿ ಟೆಂಪೋದಲ್ಲಿದ್ದ 3 ಕೋಣ, 1 ಎತ್ತು ಮತ್ತು 4 ಹಸುಗಳನ್ನು ಸಾಗಣೆ ಮಾಡುತ್ತಿರುವ ಬಗ್ಗೆ ವಿಚಾರಿಸಿರುತ್ತಾರೆ. ಅವರು ಸದರಿ ಆಕಳುಗಳನ್ನು ಹೊಂದಿರುವ ಬಗ್ಗೆ ತೃಪ್ತಿಕರವಾದ ಉತ್ತರವನ್ನು ನೀಡಲು ವಿಫಲರಾಗಿದ್ದು ಮತ್ತು ವಾಹನದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸದೆ ಸದರಿ ವಾಹನದಲ್ಲಿ ಪರವಾನಗಿ ಇಲ್ಲದೆ ಸಾಗಣೆ ಮಾಡಿದ ಬಗ್ಗೆ ಪಿಎಸ್ಐ (ಅಪರಾಧ) ಕುಮಟಾ ಪೋಲೀಸ್ ಠಾಣೆ ಇವರು ನಾಲ್ಕು ಜನ ಆಪಾದಿತರ ವಿರುದ್ಧ ಮೊಕದ್ದಮೆ ದಾಖಲಿಸಿಕೊಂಡು ಅವರನ್ನು ಪ್ರಶ್ನಿಸಿದ ನಂತರ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಿ ನಂತರ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಈ ಆಕಳುಗಳನ್ನು ಕುಮಾಟಾದ ವಾನಳ್ಳಿಯಲ್ಲಿನ ದೊಡ್ಡಿಯಲ್ಲಿ ಇರಿಸಲಾಗಿದೆ. ಸದರಿ ವಾಹನವನ್ನು ವಶಕ್ಕೆ ತೆಗೆದುಕೊಂಡು ನ್ಯಾಯಾಲಯದ ಆದೇಶದ ಪ್ರಕಾರ ಇಡಲಾಗಿದೆ. ಆಕಳುಗಳ ಮಾಲೀಕರನ್ನು ಗುರುತಿಸುವ ಬಗ್ಗೆ ತನಿಖೆಯನ್ನು ಮುಂದುವರೆಸಲಾಗಿದೆ. ಜಿಲ್ಲೆಯ ಹೆಚ್ಚಿನ ಭಾಗಗಳಲ್ಲಿ ಆಕಳು ಕಳುವಿನ ದೂರುಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿದೆ ಎಂಬುದು ಸರಿಯಲ್ಲ. ಜಿಲ್ಲೆಯಲ್ಲಿ ವರದಿಯಾದ ಆಕಳು ಕಳುವಿನ ಅಂಕಿಅಂಶಗಳು ಈ ಕೆಳಕಂಡಂತೆ ಇದೆ.

ವರ್ಷ	ವರದಿಯಾಗಿರುವುದು	ಪತ್ತೆ	ಆಪಾದಿತರು	ಹಂತ
1993	04	02	02	ವಿಚಾರಣೆಯಲ್ಲಿದೆ.
1994	03	03	04	ವಿಚಾರಣೆಯಲ್ಲಿದೆ
1995	02	02	06	ತನಿಖೆಯಲ್ಲಿದೆ.

ಇವುಗಳ ಹಿಂದೆ ವ್ಯವಸ್ಥಿತವಾದ ಗುಂಪು ಕಾರ್ಯಚರಣೆ ನಡೆಸುತ್ತಿದೆಯೋ ಇಲ್ಲವೋ ಎಂಬುದನ್ನು ಕಂಡು ಹಿಡಿಯಲು ತನಿಖೆ ಮುಂದುವರೆದಿದೆ.

ಗದಗ ಬೆಟಗೇರಿ ನೀರು, ಸರಬರಾಜು ವ್ಯವಸ್ಥೆಗೆ ವಿದ್ಯುತ್ ಸರಬರಾಜು.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ ಗದಗ ಬೆಟಿಗೇರಿ ನಗರಕ್ಕೆ ತೋರ್ಲಹಳ್ಳಿಯ ಹತ್ತಿರ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು ಕಳೆದ ಎರಡು ತಿಂಗಳಿಂದ ಅಲ್ಲಿರುವ ಪಂಪ್ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಆಗದೆ ನೀರು ಸರಬರಾಜಿನಲ್ಲಿ ಸಾಕಷ್ಟು ವ್ಯತ್ಯಯ ಆಗುತ್ತಿದೆ. ಇವನ್ನು ಸರಿಪಡಿಸುವ ದೃಷ್ಟಿಯಿಂದ ಇಂಧನಖಾತೆ ಸಚಿವರು ಕೆ.ಇ.ಬಿ.ಗೆ ಆದೇಶ ನೀಡಿ ಗದಗ ಬೆಟಗೇರಿ ನೀರು ಸರಬರಾಜು ವ್ಯವಸ್ಥೆಯಲ್ಲಿರುವ ಮೂರು

ಪಂಪ್ಸೆಟ್ಗಳಿಗೆ ಕನಿಷ್ಟ ಪ್ರತಿದಿನ 16 ಗಂಟೆಯಾದರೂ ನಿರಂತರ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಇಂಧನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಗದಗ-ಬೆಟಗೇರಿ ಅವಳಿ ನಗರಕ್ಕೆ ಕೊರ್ಲ ಹಳ್ಳಿಯಲ್ಲಿರುವ ಪಂಪಿಂಗ್ ಸ್ಟೇಷನ್ನಿಂದ ನೀರು ಸರಬರಾಜಾಗುತ್ತಿದೆ. ಈ ಪಂಪಿಂಗ್ ಸ್ಟೇಷನ್ಗೆ ಈ ಹಿಂದೆ ಕನಿಷ್ಠ 10.5 ಕೆವಿ ವೋಲ್ಟೇಜ್ನಲ್ಲಿ ವಿದ್ಯುತ್ನ್ನು ಸರಬರಾಜು ಮಾಡಬೇಕಿತ್ತು. ಆದರೆ, ಈಗ ಇದಕ್ಕಿಂತಲೂ ಕಡಿಮೆ ವೋಲ್ಟೇಜ್ನಲ್ಲಿ ಪಂಪುಗಳು ಕಾರ್ಯ ನಿರ್ವಹಿಸುವಂತೆ ಅಗತ್ಯ ಮಾರ್ಪಾಟುಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಎನ್ಜಿಇಎಫ್ ಸಂಸ್ಥೆ ಮೂಲಕ ಮಾಡಿಸಿರುತ್ತಾರೆ. ಈ ವೋಲ್ಟೇಜ್ನಲ್ಲಿ ದಿನವಹಿ 18 ಗಂಟೆಗಳ ಅವಧಿಗೆ ವಿದ್ಯುತ್ ಪೂರೈಕೆ ಮಾಡಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಮಾರ್ಚ್ 95ರ ತಿಂಗಳಿನಲ್ಲಿ 5 ದಿನಗಳನ್ನು ಹೊರತುಪಡಿಸಿ, ಉಳಿದ ದಿನಗಳಲ್ಲಿ ಅಗತ್ಯವಿರುವ ವೋಲ್ಟೇಜ್ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗಿದೆ. ರಾಜ್ಯಾದ್ಯಂತ ಉಂಟಾದ ವಿದ್ಯುತ್ ವ್ಯವಸ್ಥೆ ಕುಸಿತದಿಂದಾಗಿ ಮಾರ್ಚ್ 14 ರಿಂದ 19ರ ಅವಧಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ಅಲ್ಲದೇ ಕೆಲವು ದಿನಗಳು ಪೈಪ್ ಲೈನಿನಲ್ಲಿ ಉಂಟಾದ ದೋಷದಿಂದಾಗಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ನೀರನ್ನು ಪಂಪು ಮಾಡುವ ಕೆಲಸವನ್ನು ಸ್ಥಗಿತಗೊಳಿಸಿತ್ತು. ಈಗ ಅಗತ್ಯವಿರುವ ವೋಲ್ಟೇಜ್ನಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ನೀರನ್ನು ಪಂಪು ಮಾಡಲು ತೊಂದರೆ ಇರುವುದಿಲ್ಲ. ಅಲ್ಲದೇ, ಕೊರ್ಲಹಳ್ಳಿಯಲ್ಲಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಪಂಪಿಂಗ್ ಸ್ಟೇಷನ್ಗೆ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ಮಂಡಳಿಯು ಒಂದು 11 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ ಉಳ್ಳ 33:11 ಕೆವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುತ್ತಿದ್ದು, ಈ ವಿದ್ಯುತ್ ಉಪಕೇಂದ್ರದಿಂದ ಸದರೀ ಪಂಪಿಂಗ್ ಸ್ಟೇಷನ್ಗೆ ವಿದ್ಯುತ್ ಸರಬರಾಜನ್ನು ಮಾಡಲಾಗುವುದು. ಇದರಿಂದಾಗಿ ವೋಲ್ಟೇಜ್ ಪರಿಸ್ಥಿತಿ ಸುಧಾರಣೆಗೊಳ್ಳುತ್ತದೆ.

ರಾಷ್ಟ್ರೀಯ ಕ್ರೀಡೆಯ ಹಿನ್ನೆಲೆಯಲ್ಲಿ ಕನ್ನಡ ಬಾಲಕಿಯ ಪ್ರತಿಭೆಯನ್ನು ಗುರುತಿಸಿ ಸೂಕ್ತ ತರಬೇತಿ ನೀಡುವ ಬಗ್ಗೆ

ಶ್ರೀ ಎಸ್. ಸುರೇಶ್ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, 11 ವರ್ಷದ ಬಾಲಕಿ ಕಳೆದ ಮೂರು ವರ್ಷಗಳಲ್ಲಿ 51 ಪದಕಗಳನ್ನು ಗೆದ್ದಿದ್ದಾಳೆ. ಅದರಲ್ಲಿ 24 ಸ್ವರ್ಣ ಪದಕಗಳು ಇವೆ. ಪ್ರತಿದಿನ 14 ಕಿಲೋಮೀಟರ್ ಸ್ವಿಮ್ ಮಾಡಿ ತನ್ನ ಬಾಲ್ಯವನ್ನೇ ಸ್ಯಾಕ್ರಿಫೈಸ್ ಮಾಡಿದೆ. ಇವತ್ತು ಆ ಹುಡುಗಿ ಆಡಳಿತ ಮಂಡಳಿಯ ಅವಕೃಪೆಗೆ ಗುರಿಯಾಗಿದ್ದಾಳೆ. 11 ವರ್ಷದ ಎಳೆ ಬಾಲೆಯ ಮೇಲೆ ಅಘಾತವಾಗುವ ರೀತಿಯಲ್ಲಿ ಆ ಆಡಳಿತ ಮಂಡಳಿಯವರು ನಡೆದುಕೊಳ್ಳುತ್ತಿದ್ದಾರೆ. ಜನವರಿ ತಿಂಗಳಲ್ಲಿ ನಡೆಯುವ ರಾಷ್ಟ್ರೀಯ ಕ್ರೀಡೆಯ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಹೆಮ್ಮೆ ತರುವ ಈ ಬಾಲೆಯ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ಸೂಕ್ತ ರೀತಿಯಲ್ಲಿ ತರಬೇತಿಯನ್ನು ಮುಂದುವರಿಸಬೇಕೆಂದು ಆಡಳಿತ ಮಂಡಳಿಯವರಿಗೆ ಸರ್ಕಾರ ಸೂಚನೆ ನೀಡಿ ಯಾವುದೇ ವಿಧದಲ್ಲಿ ಆ ಬಾಲೆಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ ; ಮಾನ್ಯ ಅಧ್ಯಕ್ಷರೆ,

ಉಪಾಧ್ಯಕ್ಷರು : ನಿಯಮ 351ರ ಕೆಳಗೆ ಬೇರೆಯವರು ಮಾತನಾಡುವ ಹಾಗಿಲ್ಲ. ಸರ್ಕಾರದವರು ಉತ್ತರ ಕೊಡುತ್ತಾರೆ ಅಷ್ಟೇ.